| | | |
|---|---|---|
| 16. | Uttara Kannada | 121.34 |
| 17. | Gulbarga | 570.92 |
| 18. | Raichur | 439.97 |
| 19. | Bellary | 334.08 |
| 20. | Bidar | 297.59 |
| | **Total** | **8198.67** |

**ರಾಜ್ಯದ ಲೋಕೋಪಯೋಗಿ ರಸ್ತೆಗಳ ದುರಸ್ತಿ**

1035 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಲೋಕೋಪಯೋಗಿ ರಸ್ತೆಗಳ ದುರಸ್ತಿಗಾಗಿ (ಮೈನ್ಟೇನನ್ಸ್ ಗ್ರಾಂಟ್ಸ್) ಪ್ರತಿ ವರ್ಷ ಪ್ರತಿ ಕಿ.ಮೀ.ಗೆ ಕೊಡುವ ಹಣವೆಷ್ಟು?*

ಆ) *1991-92ನೇ ಸಾಲಿನಲ್ಲಿ ಎಷ್ಟು ಹಣ ಖರ್ಚಾಗಿದೆ?*

ಇ) *1992-93ನೇ ಸಾಲಿನಲ್ಲಿ ಇದಕ್ಕಾಗಿ ನಿಗಧಿಪಡಿಸಿರುವ ಹಣವೆಷ್ಟು ಮತ್ತು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

| | | ***ಪ್ರತಿ ಕಿ.ಮೀ.ಗೆ*** |
|---|---|---|
| ಅ) | ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆ | 13200ರೂ. ಗಳು |
| ಆ) | ಇತರ ಜಿಲ್ಲಾ ರಸ್ತೆ | 12100 ರೂ. ಗಳು. |
| ಇ) | ಹಳ್ಳಿ ದರ್ಜೆ ರಸ್ತೆ | 6050 ರೂ. ಗಳು. |
| ಈ) | ಅಯಕಟ್ಟು ರಸ್ತೆಗಳು | 6050ರೂ. ಗಳು. |

ಆ) 52.37 ಕೋಟಿ ರೂ. ಗಳನ್ನು 1991-92ನೇ ಸಾಲಿನಲ್ಲಿ ವೆಚ್ಚ ಮಾಡಲಾಗಿದೆ.

ಇ) 49.00 ಕೋಟಿ ರೂ. ಗಳನ್ನು 1992-93ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿಗಧಿಪಡಿಸಿದ್ದು ನವೆಂಬರ್ 1992ರವರೆವಿಗೆ 27.26 ಕೋಟಿ ರೂ. ವೆಚ್ಚವಾಗಿದೆ.

**Repair works to the damaged bridge on Markhandeya River M Belgaum. Kadoli Road.**

649 - SRI B.I.PATIL (Uchgaon) : Will the Minister for Public Works be pleased to state.

a) *Whether it has come to the notice of the Government that the bridge at Belgaum-Kadoli road on Markhandeya river has been severely damaged?*

b) *If so, when the Government would take up the construction work of the said bridge?*

SRI K.H. RANGANATH (Minister for Public Works) :

a) The bridge proposed at Kamgrali across Markandeya river is not damaged. The road surface and railings only were damaged. Repairs for the same are taken up.

b) Question does not arise.

**ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಜಿಲ್ಲಾಪರಿಷತ್ತುಗಳಿಗೆ ಒದಗಿಸಲಾದ ಹಣದ ಮೊತ್ತ.**

6863 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1992-93ನೇ ಸಾಲಿನಲ್ಲಿ ಜವಾಹಾರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ರಾಜ್ಯದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಒದಗಿಸಬೇಕಾಗಿದ್ದ ಹಣದ ಮೊತ್ತವೆಷ್ಟು, ಮತ್ತು ಈವರೆಗೆ ಒದಗಿಸಿದ ಹಣದ ಮೊತ್ತವೆಷ್ಟು?*

ಆ) *ಸಕಾಲಕ್ಕೆ ಸರಿಯಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಹಣ, ಬಿಡುಗಡೆ ಮಾಡದಿರುವುದಕ್ಕೆ ಕಾರಣಗಳೇನು, ವಿಳಂಬದಿಂದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ಥಗಿತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಇ) *ನಿಗದಿತ ಕಾಮಗಾರಿಗಳನ್ನು ಕಾರ್ಯಗತ ಮಾಡಲು ಅವಶ್ಯವಿರುವ ಹಣದ ಮೊತ್ತವೆಷ್ಟು, ಹಾಗೂ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

| | *೧೯೯೩-೯೪ನೇ ಸಾಲಿನಲ್ಲಿ* | |
|---|---|---|
| | *ಒದಗಿಸಬೇಕಾಗಿದ್ದ ಹಣ* | *ಒದಗಿಸಿದ್ದ ಹಣ* |
| 1. ಜಿಲ್ಲಾ ಪರಿಷತ್ | 4962.16 | 4898.31 |
| 2. ಮಂಡಲ ಪಂಚಾಯತ್ | 6801.16 | 6618.86 |
| **ಒಟ್ಟು** | **11763.32** | **11517** |

ಅ) ಈ ಸಾಲಿನಲ್ಲಿ ಮೊದಲನೇ ಕಂತಿನ ಹಣವನ್ನು ಏಪ್ರಿಲ್ ತಿಂಗಳಲ್ಲಿ ಎಲ್ಲಾ ಜಿಲ್ಲಾ ಪರಿಷತ್ ಡಿಆರ್‌ಡಿಎಸ್, ಬೆಂಗಳೂರುಗಳಿಗೆ ಬಿಡುಗಡೆ ಮಾಡಲಾಗಿದೆ. ತದನಂತರ, ಎರಡನೇ ಕಂತಿನ ಹಣವನ್ನು ಕೂಡ ಈ ತಿಂಗಳಲ್ಲಿ (ಡಿಸೆಂಬರ್) ಎಲ್ಲಾ ಜಿಲ್ಲಾ ಪರಿಷತ್, ಡಿಆರ್,ಡಿಎಸ್, ಬೆಂಗಳೂರುಗಳಿಗೆ ಬಿಡುಗಡೆ ಮಾಡಲಾಗಿದೆ. ಆದುದರಿಂದ ಸರ್ಕಾರವು ಹಣವನ್ನು ಸಕಾಲದಲ್ಲಿ, ಎಲ್ಲಾ ಜಿಲ್ಲಾ ಪರಿಷತ್ ಡಿಆರ್‌ಡಿಎಸ್, ಬೆಂಗಳೂರು ಗಳಿಗೆ ಬಿಡುಗಡೆ ಮಾಡಲಾಗಿದೆ.

ಇ) ನಿಗದಿತ ಕಾಮಗಾರಿಗಳನ್ನು ಕಾರ್ಯಗತ ಮಾಡಲು ಅವಶ್ಯವಿರುವ ಹಣದ ಮೊತ್ತ 11763.32 ಲಕ್ಷ ರೂ.ಗಳು.

ಈಗಾಗಲೇ 11517.17 ಲಕ್ಷ ರೂ.ಗಳನ್ನು ಎಲ್ಲಾ ಜಿಲ್ಲಾ ಪರಿಷತ್ ಡಿಆರ್‌ಡಿಎಸ್, ಬೆಂಗಳೂರು ಗಳಿಗೆ ಬಿಡುಗಡೆ ಮಾಡಲಾಗಿದೆ.